# ಸಬ್ಸಿಡಿಯಿಂದ ಸಿನಿಮಾ ಸಂಸ್ಕೃತಿ ಬೆಳೆದೀತೆ?

**ಇನ್ನೂರು ಸಿನಿಮಾಗಳಿಗೆ ನೆರವು ನೀಡಲು ಮುಂದಾಗಿರುವ ಸರ್ಕಾರದ ನಿರ್ಧಾರ ಅಗ್ಗದ ಜನಪ್ರಿಯ ತಂತ್ರ. ಕನ್ನಡ ಚಿತ್ರರಂಗದ ಬಗ್ಗೆ ಸರ್ಕಾರದ ಕಾಳಜಿ ಪ್ರಾಮಾಣಿಕವಾಗಿದ್ದರೆ, ಸಹಾಯಧನ ಹಾಗೂ ಪ್ರಶಸ್ತಿಗಳನ್ನು ಸರಿಯಾದ ಸಮಯಕ್ಕೆ ನೀಡಬೇಕು.**

ಇನ್ನೂರು ಕನ್ನಡ ಸಿನಿಮಾಗಳಿಗೆ ಸಹಾಯಧನ ನೀಡುವ ರಾಜ್ಯ ಸರ್ಕಾರದ ನಿರ್ಧಾರದಿಂದ ಸಿನಿಮಾ ಸಂಸ್ಕೃತಿಗೆ ಉಪಯೋಗವೇನೂ ಇಲ್ಲ. ‘ಸಿನಿಮಾ ಸಂಸ್ಕೃತಿ’ ಮತ್ತು ‘ಸಿನಿಮಾ ಉದ್ಯಮ’ದ ನಡುವಿನ ವ್ಯತ್ಯಾಸ ಸರ್ಕಾರಕ್ಕೆ ಸ್ಪಷ್ಟವಾದಂತಿಲ್ಲ. ಸಿನಿಮಾ ನಿರ್ಮಾಣವನ್ನು ಕಲೆಗಿಂತಲೂ ಹೆಚ್ಚು ವ್ಯಾಪಾರವಾಗಿ ಪರಿಗಣಿಸುವ ನಿರ್ಮಾತೃಗಳಿಗೆ ಸರ್ಕಾರದ ಪ್ರೋತ್ಸಾಹ ಅನಗತ್ಯ. ಕೋಟ್ಯಂತರ ರೂಪಾಯಿ ಖರ್ಚು ಮಾಡುವ ನಿರ್ಮಾಪಕರಿಗೆ ಸರ್ಕಾರ ಸಬ್ಸಿಡಿ ನೀಡುವುದು ಸಾರ್ವಜನಿಕರ ತೆರಿಗೆ ಹಣದ ಅಪಬಳಕೆಯಲ್ಲದೆ ಮತ್ತೇನೂ ಅಲ್ಲ. ಸರ್ಕಾರದ ಪ್ರೋತ್ಸಾಹ ಬೇಕಿರುವುದು ಸಿನಿಮಾ ಮಾಧ್ಯಮವನ್ನು ವ್ಯಾಪಾರಕ್ಕಿಂತಲೂ ಹೆಚ್ಚು ಕಲೆಯನ್ನಾಗಿ ನಂಬಿರುವ ನಿರ್ಮಾತೃಗಳಿಗೆ. ಈ ವ್ಯತ್ಯಾಸವನ್ನು ಅರಿಯದೆ, ಕಲಾತ್ಮಕ ಮತ್ತು ಕಮರ್ಷಿಯಲ್ ಚಿತ್ರಗಳನ್ನು ಒಂದೇ ತಕ್ಕಡಿಯಲ್ಲಿ ಅಳೆಯಲು ಹೊರಟಿರುವ ಸರ್ಕಾರದ ನಿರ್ಧಾರ ದುರದೃಷ್ಟಕರ. ಈ ನಿರ್ಧಾರ ಸಿನಿಮಾ ಸಂಸ್ಕೃತಿಗೆ ಹಾನಿಕರವೂ ಹೌದು. ಯಾವುದೇ ಬದ್ಧತೆಯಿಲ್ಲದೆ, ಸಿನಿಮಾ ವ್ಯಾಕರಣವೂ ತಿಳಿಯದೆ ಸಿನಿಮಾ ಹೆಸರಿನಲ್ಲಿ ದೃಶ್ಯಗಳನ್ನು ಕಲೆಹಾಕುವವರಿಗೆ ಬತ್ತಾಸು ನೀಡಲು ಸರ್ಕಾರ ಹೊರಟಂತಿದೆ.

ಸರ್ಕಾರದ ಒತ್ತಾಸೆ ಬೇಕಾಗಿರುವುದು ಗುಣಮಟ್ಟದ ಸಿನಿಮಾಗಳಿಗೆ. ಕನ್ನಡ ನುಡಿ ಮತ್ತು ಸಂಸ್ಕೃತಿಯನ್ನು ರಾಷ್ಟ್ರ ಮತ್ತು ವಿಶ್ವಮಟ್ಟದಲ್ಲಿ ಸಮರ್ಥವಾಗಿ ಅಭಿವ್ಯಕ್ತಿಸುವ ಸಿನಿಮಾಗಳಿಗೆ. ಅಂಥ ಸಿನಿಮಾಗಳು ಮತ್ತು ನಿರ್ಮಾತೃಗಳನ್ನು ಗೌರವಿಸುವುದು ಸರ್ಕಾರದ ಕರ್ತವ್ಯ. ನಿಜವಾದ ಸಿನಿಮಾ ಸಾಧಕರಿಗೆ ಹಾಗೂ ಅವರ ಕೃತಿಗಳಿಗೆ ಹೆಚ್ಚಿನ ಸವಲತ್ತುಗಳನ್ನು ಕಲ್ಪಿಸುವುದಕ್ಕೆ ಯಾರ ಆಕ್ಷೇಪವೂ ಇಲ್ಲ. ಸಿನಿಮಾ ನಿರ್ಮಾಣಕ್ಕ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತೂ ಸರ್ಕಾರ ಪ್ರಯತ್ನ ನಡೆಸಬೇಕು.

100 ಸಿನಿಮಾಗಳಿಗೆ ನೀಡಲಾಗುತ್ತಿದ್ದ ಸಹಾಯಧನವನ್ನು 2016ರಲ್ಲಿ 125ಕ್ಕೆ ಹೆಚ್ಚಿಸಲಾಗಿತ್ತು. ಆ ಸಂಖ್ಯೆಯನ್ನೀಗ 200ಕ್ಕೆ ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ. ಈ ಹೆಚ್ಚಳವನ್ನು ಗಮನಿಸಿದರೆ, ನೂರಾರು ಸಂಖ್ಯೆಯಲ್ಲಿ ಉತ್ತಮ ಚಿತ್ರಗಳು ಕನ್ನಡದಲ್ಲಿ ರೂಪುಗೊಳ್ಳುತ್ತಿವೆಯೆಂದು ಸರ್ಕಾರ ಭಾವಿಸಿರುವಂತಿದೆ. ಜರಡಿ ಹಿಡಿದರೆ ನೂರು ಸಿನಿಮಾಗಳು ದೊರೆಯುವುದೂ ಕಷ್ಟವಾಗಿರುವಾಗ, ಇನ್ನೂರು ಸಿನಿಮಾಗಳಿಗೆ ನೆರವು ನೀಡಲು ಮುಂದಾಗಿರುವುದು ಹಾಗೂ ಇತರ ಕಲಾಪ್ರಕಾರಗಳ ಬಗ್ಗೆ ಅಷ್ಟೇನೂ ಉತ್ಸಾಹ ತೋರಿಸದ ಸರ್ಕಾರ, ಸಿನಿಮಾ ಬಗ್ಗೆ ವಿಪರೀತ ಆಸಕ್ತಿ ಪ್ರದರ್ಶಿಸುವುದು ಅಗ್ಗದ ಜನಪ್ರಿಯ ತಂತ್ರವಲ್ಲದೆ ಬೇರೇನೂ ಅಲ್ಲ.

ಕನ್ನಡ ಚಿತ್ರರಂಗದ ಬಗ್ಗೆ ಸರ್ಕಾರದ ಕಾಳಜಿ ಪ್ರಾಮಾಣಿಕವಾಗಿದ್ದರೆ, ಸಹಾಯಧನ ಹಾಗೂ ಪ್ರಶಸ್ತಿಗಳನ್ನು ಸರಿಯಾದ ಸಮಯಕ್ಕೆ ನೀಡಬೇಕು. ಕಳೆದ ನಾಲ್ಕೈದು ವರ್ಷಗಳಿಂದ ಸಹಾಯಧನ ನೀಡಲಾಗಿಲ್ಲ. ಪ್ರಶಸ್ತಿ ಆಯ್ಕೆ ಮತ್ತು ವಿತರಣೆ ಪ್ರಕ್ರಿಯೆಯೂ ನಡೆದಿಲ್ಲ. ಸರಿಯಾದ ಸಮಯಕ್ಕೆ ದೊರೆಯದ ನೆರವು ಮತ್ತು ಪ್ರೋತ್ಸಾಹ ತನ್ನ ಕಿಮ್ಮತ್ತು ಕಳೆದುಕೊಳ್ಳುತ್ತದೆ ಎನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು.

ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವದ ಹದಿಮೂರನೇ ಆವೃತ್ತಿ ಇತ್ತೀಚೆಗಷ್ಟೇ ಮುಗಿದಿದೆ. ಇಷ್ಟು ವರ್ಷಗಳಾದರೂ ಚಿತ್ರೋತ್ಸವಕ್ಕೊಂದು ನಿಯಮಿತ ಕ್ಯಾಲೆಂಡರ್ ಗೊತ್ತುಪಡಿಸುವುದು ಸಾಧ್ಯವಾಗಿಲ್ಲ. ಬೆಂಗಳೂರು ಸಿನಿಮೋತ್ಸವದ ನಂತರ ಪ್ರಾರಂಭವಾದ ಚಿತ್ರೋತ್ಸವಗಳು ನಿಯಮಿತ ಕ್ಯಾಲೆಂಡರ್ ಹೊಂದುವ ಮೂಲಕ ವಿಶ್ವದ ಗಮನಸೆಳೆದಿರುವಾಗ ನಾವಿನ್ನೂ ದಿನಾಂಕ ಸ್ಪಷ್ಟಪಡಿಸಿಕೊಳ್ಳಲೇ ಒದ್ದಾಡುತ್ತಿದ್ದೇವೆ. ಇನ್ನು ಮುಂದೆ, ಪ್ರತಿ ವರ್ಷದ ಮಾರ್ಚ್ 3ರಂದು ಚಿತ್ರೋತ್ಸವ ಆರಂಭವಾಗುವುದಾಗಿ ಮುಖ್ಯಮಂತ್ರಿ ಹೇಳಿದ್ದರೂ, ಅದಕ್ಕೆ ಅಗತ್ಯವಾದ ಸಂಪನ್ಮೂಲಗಳ ಬಗ್ಗೆ ಏನನ್ನೂ ಹೇಳಿಲ್ಲ. ನಮ್ಮಲ್ಲಿ ಚಿತ್ರೋತ್ಸವದ ಸಂಘಟಕರಿಗೆ ಸಿನಿಮೋತ್ಸವ ಹಬ್ಬವಾಗಿ ಮುಖ್ಯವಾಗಿದೆಯೇ ಹೊರತು ಕಲಿಕೆಯ ಕಮ್ಮಟವಾಗಿ ಕಂಡಿಲ್ಲ.

ಕನ್ನಡದ ಮೊದಲ ವಾಕ್ಚಿತ್ರ ‘ಸತಿ ಸುಲೋಚನಾ’ (1934) ತೆರೆಕಂಡು ತೊಂಬತ್ತು ವರ್ಷಗಳಾಗುತ್ತಿವೆ. ಒಂಬತ್ತು ದಶಕಗಳ ನಂತರವೂ ಕನ್ನಡ ಚಿತ್ರೋದ್ಯಮ ಬಾಲಗ್ರಹ ಬಾಧೆಯಿಂದ ಹೊರಗೆ ಬಂದಿಲ್ಲ. ಸಿನಿಮಾ ನಿರ್ಮಾಣಕ್ಕೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಹೊಂದುವ ಮಾತಿರಲಿ, ತಾನು ರೂಪುಗೊಳ್ಳುವ ನೆಲದ ಸೊಗಡನ್ನು ಹೊಂದುವುದೇ ಇಂದಿನ ಚಲನಚಿತ್ರಗಳಿಗೆ ಸಾಧ್ಯವಾಗುತ್ತಿಲ್ಲ. ಸಿದ್ಧಸೂತ್ರಗಳಿಂದ ಹೊರಬರದ ಕಾರಣದಿಂದಾಗಿಯೂ ಕೌಟುಂಬಿಕ ಪ್ರೇಕ್ಷಕರು ಕನ್ನಡ ಸಿನಿಮಾಗಳಿಂದ ಅಂತರ ಕಾಪಾಡಿಕೊಳ್ಳುತ್ತಿದ್ದಾರೆ. ನೆರೆಯ ಮಲಯಾಳಂ ಹಾಗೂ ತಮಿಳು ಸಿನಿಮಾಮಂದಿ ದೇಶವೇ ಬೆರಗಿನಿಂದ ನೋಡುವ ಕಲಾಕೃತಿಗಳನ್ನು ರೂಪಿಸುತ್ತಿದ್ದಾರೆ. ತೆಲುಗಿನ ವ್ಯಾಪಾರಿ ಚಿತ್ರಗಳು ತಮ್ಮ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳುತ್ತಿವೆ. ಕನ್ನಡ ಸಿನಿಮಾಮಂದಿ ತವರಿನಲ್ಲೇ ಅನ್ಯರಾಗಿ ಉಳಿದು ಪ್ರೇಕ್ಷಕರ ಅನುಕಂಪ, ಕೃಪಾಕಟಾಕ್ಷದ ಮೇಲೆ ಬದುಕಲು ಹಂಬಲಿಸುತ್ತಿದ್ದಾರೆ. ಇಂಥವರಿಗೆ ಸರ್ಕಾರ ಕೂಡ ಸಹಾಯಧನದ ಮೂಲಕ ಬೆಂಬಲ ನೀಡುತ್ತಿದೆ. ಸರ್ಕಾರದ ಬೆಂಬಲ ಬೇಕಿರುವುದು ಅನುಕಂಪವನ್ನು ನೆಚ್ಚಿಕೊಂಡಿರುವವರಿಗೆ ಅಲ್ಲ, ಸಿನಿಮಾ ಮಾಧ್ಯಮದ ಸಾಧ್ಯತೆಗಳನ್ನು ಹೆಚ್ಚಿಸುವ ಹಾಗೂ ಅಂಥ ಹುಡುಕಾಟದ ಮೂಲಕ ನಾಡು ನುಡಿಯ ಘನತೆಯನ್ನು ಎತ್ತಿಹಿಡಿಯುವವರಿಗೆ.

■ ರಘುನಾಥ ಚ.ಹ.



ಈಶ್ವರ್